ಕಾಳಿಕಾಂಬ ಕಾಲೋನಿ, ದೊಡ್ಡಮೂಡಹಳ್ಳಿ, ಚಿಕ್ಕಮೂಡಹಳ್ಳಿ, ರಂಗಸಂದ್ರ, ಕೋಳಿಪಾಳ್ಯ, ಬಾನವಾಡಿ, ವೀರಯ್ಯನಪುರ ಮತ್ತು ಬೆಚ್ಚಲವಾಡಿ ಕಾಲೋನಿಗಳಲ್ಲಿ ಹದ್ದುಬಸ್ತು ಕಾರ್ಯ ಪೂರ್ಣಗೊಂಡಿದ್ದು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಕೆಲಸ ಬಾಕಿ ಇದೆ. ಉಳಿದ ಕಾಲೋನಿಗಳಲ್ಲಿ ಕೂಡ ಅಳತೆ ಕಾರ್ಯ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು,

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಖಾಯಂ.

928(1272) ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಒಟ್ಟು ಸಂಖ್ಯೆ ಎಷ್ಟು;

ಆ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ವಿಮಲಾಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ ದಿನಾಂಕ: 1-1-1999 ರಲ್ಲಿದ್ದಂತೆ 39053 ಅಂಗನವಾಡಿ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಅಂಗನವಾಡಿ ಕಾರ್ಯಕರ್ತೆಯರು ಗೌರವಧನ ಆಧಾರಿತ ಕಾರ್ಯಕರ್ತೆಯರಾಗಿರುತ್ತಾರೆ. ದಿನಾಂಕ: 9-8-96ರ ತನ್ನ ಆದೇಶದಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಲಿಯ (ಕೆಎಟಿ) ರಾಜ್ಯ ಸರ್ಕಾರಕ್ಕೆ ಅಂಗನವಾಡಿ ಕಾರ್ಯಕರ್ತೆಯನ್ನು ಕ್ರಮಬದ್ಧಗೊಳಿಸಲು ಆದೇಶ ನೀಡಿರುತ್ತದೆ. ಭಾರತ ಸರ್ಕಾರದ ಸೂಚನೆಯಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿಯನ್ನು ದಾಖಲು ಮಾಡಲಾಗಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗಿದೆ.

ಶೌಚಾಲಯ ನಿರ್ಮಾಣಕ್ಕೆ ಹೆಚ್ಚುವರಿ ಹಣ ಮಂಜೂರಾತಿ.

929(1464) ಶ್ರೀ ಎಸ್. ಜಯಣ್ಣ (ಕೊಳ್ಳೆಗಾಲ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಮನೆ ನಿರ್ಮಾಣಕ್ಕೆ ನಿಗಧಿಪಡಿಸಲಾದ ಹಣ ಎಷ್ಟು;

ಆ) ಈ ಬಗ್ಗೆ ಸರ್ಕಾರ ನೀಡಿರುವ ಹಣದಿಂದ ಉತ್ತಮ ಮನೆ ನಿರ್ಮಾಣ ಮಾಡಲು ಸಾಧ್ಯವೆ;

ಇ) ಸದರಿ ಮನೆಗೆ ನೀಡುವ ಹಣದಿಂದ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿರುವುದು ಕಡ್ಡಾಯವೇ;

ಈ) ಹಾಗಿದ್ದಲ್ಲಿ ಮನೆ ನಿರ್ಮಾಣಕ್ಕೆ ನೀಡುವ ಹಣಸಾಕಾಗದೇ ಇರುವುದರಿಂದ ಶೌಚಾಲಯ ನಿರ್ಮಾಣಕ್ಕೆ ಬೇರೆ ಹಣ ಒದಗಿಸಿ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) 1998-99ನೇ ಸಾಲಿನ ಮನೆ ನಿರ್ಮಾಣಕ್ಕಾಗಿ ನಿಗಧಿಪಡಿಸಿರುವ ಹಣ ಈ ಕೆಳಕಂಡಂತೆ ಇರುತ್ತದೆ.

ಆಶ್ರಯ	-	4500	ಲಕ್ಷಗಳು
ಅಂಬೇಡ್ಕರ್	-	2386	ಲಕ್ಷಗಳು
ಇಂದಿರಾ ಆವಾಜ್ ಯೋಜನೆ	-	7901.96	ಲಕ್ಷಗಳು

ಆ) ಸರ್ಕಾರ ನೀಡುವ ಹಣದಿಂದ ಉತ್ತಮ ಮನೆ ಕಟ್ಟಬಹುದು.

ಇ) ಹೌದು.

ಈ) ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ಮನೆ ಕಟ್ಟಲು 20,000 ರೂ.ಗಳನ್ನು ನಿಗಧಿಪಡಿಸಲಾಗಿದೆ. ಇದರಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ರೂ.1,000 ಹಣ ಬಳಸಿಕೊಳ್ಳಲಾಗುವುದು. ಬೇರೆ ಹಣ ಬಿಡುಗಡೆ ಮಾಡುವುದಿಲ್ಲ.

ಉಪಾಧ್ಯಕ್ಷರು :— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಮಂಡಿಸಲಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೇ, ನಾನು ನಿಲುವಳಿ ಸೂಚನೆ ಕೊಟ್ಟಿದ್ದೇನೆ. ಪ್ರಶ್ನೋತ್ತರ ಆದತಕ್ಷಣ ನಿಯಮ 60ರ ಪ್ರಕಾರ ನನಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಬೇರೆ ಸಮಯ ಕೊಡುತ್ತೇನೆಂದು ಹೇಳಬೇಕು.

ಉಪಾಧ್ಯಕ್ಷರು :— ಅದನ್ನು ಅಡ್ಮಿಟ್ ಮಾಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳುತ್ತೇನೆ, ಎನ್ನುವುದಕ್ಕಾದರೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :— ನಾನು ಅಡ್‌ಮಿಟ್ ಮಾಡಿಲ್ಲವೆಂದು ಹೇಳಿದೆನಲ್ಲಾ.